**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:ಡಿಟಿಇ/22/ಸಿಡಿಸಿ(1)/2023(6358872)

ಆಯುಕ್ತರ ಕಛೇರಿ
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:23/01/2025.

**:ಸುತ್ತೋಲೆ:**

ವಿಷಯ: ಪಾಲಿಟೆಕ್ನಿಕ್ ಸಂಸ್ಥೆಗಳ ಬೋಧಕ ವರ್ಗದವರು ನಿರ್ವಹಿಸ ಬೇಕಾಗಿರುವ ಶೈಕ್ಷಣಿಕ ಕಾರ್ಯಭಾರಗಳ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 12 ಡಿಟಿಇ 2019(part) ದಿ:22-04-2020
2. ಎಐಸಿಟಿಇ ನವದೆಹಲಿ ಇವರು ಪ್ರಕಟಿಸಿರುವ ಡಿಪ್ಲೊಮಾ ರೆಗ್ಯುಲೇಷನ್-2019 ಎಫ್.ನಂ.61-1 / ಆರ್ಐಎಫ್ಡಿ / 7ನೇ ಸಿಪಿಸಿ / 2016-17 ದಿ:01-03-2019

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ವರ್ಗದವರು ನಿರ್ವಹಿಸಬೇಕಾಗಿರುವ ಕನಿಷ್ಟ ಶೈಕ್ಷಣಿಕ ಕಾರ್ಯಭಾರವನ್ನು ಉಲ್ಲೇಖ (1) & (2) ರ ಎಐಸಿಟಿಇ ನಿಯಮಾವಳಿಗಳನ್ವಯ ವಾರಕ್ಕೆ 40 ಗಂಟೆಗಳಿಗೆ ನಿಗದಿಪಡಿಸಲಾಗಿದ್ದು, ಕನಿಷ್ಟ ಬೋಧನಾ ಕಾರ್ಯವನ್ನು ಕೆಳಕಂಡ ಕೋಷ್ಟಕದಲ್ಲಿ ಕಾಣಿಸಲಾಗಿದೆ.

| Designation | Minimum Teaching Contact Hours per week (Teaching/Lecture and Laboratory/Practice) |
|---|---|
| Lecturers | 18 |
| Head of Section | 16 |
| Principal | 6 |

(Teaching/Lecture ಮತ್ತು Laboratory/Practice ಕಾರ್ಯಭಾರವು ಬೋಧನಾ ಕಾರ್ಯವಾಗಿರುತ್ತದೆ)

ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಒಬ್ಬ ಬೋಧಕರಿಗೆ ಒಂದು ಥಿಯರಿ ವಿಷಯದ ಸಂಪೂರ್ಣ ಕಾರ್ಯಬಾರವನ್ನು ವಹಿಸಿ ನಿರ್ವಹಿಸುವಂತೆ ಕ್ರಮವಹಿಸತಕ್ಕದ್ದು.

Integrated ಪಠ್ಯಕ್ರಮದ ವಿಷಯಗಳಲ್ಲಿ ವಿಭಾಗದ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ 30 ವಿದ್ಯಾರ್ಥಿಗಳಿಗೆ ಒಂದು ಬ್ಯಾಚ್‌ನಂತೆ ಪ್ರತ್ಯೇಕ ಬ್ಯಾಚ್‌ಗಳನ್ನು ರಚಿಸಿ, ಥಿಯರಿ ಮತ್ತು ಪ್ರಯೋಗಾಲಯ ತರಬೇತಿಯನ್ನು ನಿರ್ವಹಿಸುವಂತೆ ಕ್ರಮವಹಿಸತಕ್ಕದ್ದು.

ಸೆಮಿಸ್ಟರ್ ಅಂತಿಮ ಥಿಯರಿ ಪರೀಕ್ಷೆ (SEE) ಇರುವ Integrated ಪಠ್ಯವಿಷಯವನ್ನು ಖಾಯಂ ಉಪನ್ಯಾಸಕರುಗಳಿಗೆ ಹಂಚಿಕೆ ಮಾಡಿ, ಹೆಚ್ಚುವರಿ ಉಳಿದ ಬೋಧನಾ ಕಾರ್ಯಭಾರವನ್ನು ಅತಿಥಿ ಉಪನ್ಯಾಸಕರುಗಳಿಗೆ ಹಂಚಿಕೆ ಮಾಡುವುದು.

ಮುಂದುವರೆದು, ವಿದ್ಯಾರ್ಥಿಗಳ ಇಂಟರ್ನಶಿಪ್ (Guidance & Assessment), ಪ್ರಾಜೆಕ್ಟ್ ವರ್ಕ್ (Guidance & Assessment), ಟುಟೋರಿಯಲ್, ಆಂತರಿಕ (CIE) ಪರೀಕ್ಷಾ ಕಾರ್ಯಗಳು, Student Counseling, ಪ್ಲೇಸ್ ಮೆಂಟ್ ಕಾರ್ಯಗಳು ಹಾಗೂ ಸಂಸ್ಥೆ/ ವಿಭಾಗದಲ್ಲಿನ ಇನ್ನಿತರ ಶೈಕ್ಷಣಿಕ / ಆಡಳಿತ ಕಾರ್ಯಭಾರಗಳನ್ನು ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರಲ್ಲಿ ಸಮಾನವಾಗಿ ಹಂಚಿಕೆ ಮಾಡಿ, ಪ್ರತಿ ಬೋಧಕರು (ನಿಗಧಿತ ಕನಿಷ್ಟ ಬೋಧನಾ ಕಾರ್ಯ ಒಳಗೊಂಡಂತೆ) ವಾರಕ್ಕೆ 40 ಗಂಟೆಗಳ ಕಾರ್ಯಭಾರವನ್ನು ನಿರ್ವಹಿಸುವಂತೆ ಕ್ರಮ ವಹಿಸುವುದು.

ಸಂಸ್ಥೆಯ ಬೋಧಕವರ್ಗದವರು ತಮ್ಮ ವೈಯಕ್ತಿಕ ವೇಳಾಪಟ್ಟಿಯಲ್ಲಿ 40 ಗಂಟೆಗಳ ಕಾರ್ಯಭಾರದ ಮಾಹಿತಿಯೊಂದಿಗೆ ವಿಭಾಗದ ವಿಭಾಗಾಧಿಕಾರಿಗಳ ಮೂಲಕ ದಾಖಲೆಗಳನ್ನು ಪ್ರಾಂಶುಪಾಲರಿಗೆ ತಪ್ಪದೆ ಸಲ್ಲಿಸುವುದು.

Manjunath

**ಆಯುಕ್ತರು**

ಇವರಿಗೆ:

ರಾಜ್ಯದ ಎಲ್ಲಾ ಸರ್ಕಾರಿ / ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಸೂಕ್ತ ಕ್ರಮಕ್ಕಾಗಿ.

ಪ್ರತಿ:

1. ಆಯುಕ್ತರು / ನಿರ್ದೇಶಕರ ಆಪ್ತ ಶಾಖೆಗೆ-ಮಾಹಿತಿಗಾಗಿ.
2. ಜಂಟಿ ನಿರ್ದೇಶಕರು (ಆಡಳಿತ)/ ಜಂಟಿ ನಿರ್ದೇಶಕರು (ಪರೀಕ್ಷೆ)/ಜಂಟಿ ನಿರ್ದೇಶಕರು (ತನಿಖೆ)/ ಜಂಟಿ ನಿರ್ದೇಶಕರು (ಸಿಡಿಸಿ), ತಾಂ.ಶಿ.ಇ- ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
3. ಇ-ಆಡಳಿತ ವಿಭಾಗಕ್ಕೆ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು.